ಈ. ಉದ್ಭವಿಸುವುದಿಲ್ಲ.

ಕಂಟ್ರಾಕ್ಟ್ ಕೆಲಸಗಳನ್ನು ವ್ಯವಸಾಯ ಕೂಲಿಗಾರರಿಗೆ ನೀಡುವ ಬಗ್ಗೆ

591 - ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂಟ್ರಾಕ್ಟ್ ಕೆಲಸಗಳನ್ನು ವ್ಯವಸಾಯ ಕೂಲಿಗಾರರಿಗೆ ನೀಡಲು ಸರ್ಕಾರವು ಪರಿಗಣಿಸುವುದೇ?

ಆ) ರಾಜ್ಯದಲ್ಲಿ ಕೂಲಿಗಾರರ ಸಹಕಾರ ಸಂಘಗಳಿರುವುದು ವಾಸ್ತವಾಂಶವಲ್ಲವೇ?

ಇ) ಅವುಗಳು ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಸರ್ಕಾರವು ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಂಡಾಗ ಸ್ಥಳೀಯ ಕಾರ್ಮಿಕರು ಉದ್ಯೋಗಾವಕಾಶ ಪಡೆಯುವರು.

ಆ) ಹೌದು.

ಇ) ಸಮರ್ಥ ನಾಯಕತ್ವದ ಅಭಾವ, ಅಸಮರ್ಥ ನಿರ್ವಹಣೆ ಮತ್ತು ಸದಸ್ಯರಲ್ಲಿ ಆಂತರಿಕ ಬಿಕ್ಕಟ್ಟು ಇತ್ಯಾದಿ.

ಮೂರ್ತೆದಾರರ ಸೊಸೈಟಿಗಳ ಸಂಖ್ಯೆ

553 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮೂರ್ತೆದಾರರ ಸೊಸೈಟಿಗಳಿವೆ?

ಆ) ಇನ್ನೆಷ್ಟು ಸಹಕಾರಿ ಸಂಘಗಳು ನೋಂದಾವಣೆಗೆ ಅರ್ಜಿ ಸಲ್ಲಿಸಿವೆ?

ಇ) ಅವುಗಳನ್ನು ಯಾವಾಗ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) 35

ಆ) 19

ಇ) ಅಬಕಾರಿ ಇಲಾಖೆಯಿಂದ ಅನುಮತಿ ದೊರೆತ ತಕ್ಷಣ.

ರೈತರು ಪಡೆದು ಕೊಂಡಿರುವ ಸಹಕಾರಿ ಸಾಲದ ಮೇಲಿನ ಬಡ್ಡಿ ಮನ್ನಾ

557 - ಶ್ರೀ ಗುರುಪಾದಪ್ಪ ನಾಗಮಾರಹಳ್ಳಿ (ಔರಾದ್): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ವಿವಿಧ ಸಹಕಾರ ಸಂಘಗಳಿಂದ ಹಾಗೂ ಸಹಕಾರಿ ಬ್ಯಾಂಕುಗಳಿಂದ ರೈತರು ಪಡೆದುಕೊಂಡಿರುವ ಸಾಲದ ಮೊತ್ತವೆಷ್ಟು?

ಆ) ಎಷ್ಟು ವರ್ಷಗಳಿಂದ ಈ ಸಾಲದ ಮರುಪಾವತಿಯಾಗಿಲ್ಲ ಹಾಗೂ ಇದಕ್ಕೆ ಸೇರಿರುವ ಬಡ್ಡಿಯ ಮೊತ್ತವೆಷ್ಟು?

ಇ) ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ರೈತರು ಅತಿವೃಷ್ಟಿ ಅನಾವೃಷ್ಟಿ ಹಾಗೂ ಭೂಕಂಪದಂತಹ ನೈಸರ್ಗಿಕ ದುರಂತಗಳನ್ನು ಎದುರಿಸುತ್ತಿರುವುದರಿಂದ ಸರ್ಕಾರವು ಕಡೇ ಪಕ್ಷ ಸಹಕಾರಿ ಸಾಲದ ಮೇಲೆ ಬಡ್ಡಿಯನ್ನಾದರೂ ಮನ್ನಾಮಾಡುವುದೇ?

ಈ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ರಾಜ್ಯದಲ್ಲಿ ಸಹಕಾರ ಸಂಘಗಳಿಂದ ಹಾಗೂ ಸಹಕಾರಿ ಬ್ಯಾಂಕುಗಳಿಂದ ರೈತರು ಕಳೆದ ಮೂರು ವರ್ಷಗಳಲ್ಲಿ ಪಡೆದ ಸಾಲದ ವಿವರ:

(ರೂ. ಲಕ್ಷಗಳಲ್ಲಿ)

	ವರ್ಷಗಳು		
ಸಾಲದ ವಿವರ	1990-91	1991-92	1992-93
1. ಅಲ್ಪಾವಧಿ	9678.87	8993.21	21105.00
2. ಮಧ್ಯಮಾವಧಿ	863.37	760.03	918.00
3. ಮಧ್ಯಮಾವಧಿ ಪರಿವರ್ತಿತ	159.58	36.53	849.60
4. ದೀರ್ಘಾವಧಿ	7216.54	9721.30	12056.95
ಒಟ್ಟು	17918.36	19511.07	34929.55

ಆ) ದಿನಾಂಕ 30-6-1993ಕ್ಕೆ 350.91 ಕೋಟಿ ರೂ.ಗಳ ಸಾಲ ಮರುಪಾವತಿಯಾಗಿಲ್ಲ. ವರ್ಷಾವಾರು ವಿವರಗಳು ಕೆಳಕಂಡಂತೆ ಇವೆ.

(ಕೋಟಿ ರೂ.ಗಳಲ್ಲಿ)

ಒಂದು ವರ್ಷದ ಒಳಗೆ	102.54
ಒಂದರಿಂದ ಮೂರು ವರ್ಷ	132.83
3 ವರ್ಷದಿಂದ ಮೇಲ್ಪಟ್ಟು	115.54
ಒಟ್ಟು	350.91

ಮರುಪಾವತಿಯಾಗಿಲ್ಲವಾದ ಸಾಲದಲ್ಲಿ ಸೇರಿರುವ ಬಡ್ಡಿ 147.14ಕೋಟಿ ರೂ.ಗಳಷ್ಟು ಇರುತ್ತದೆ.

ಇ) ಇಲ್ಲ

ಈ) ರೈತರು ಹಾಗೂ ಸಹಕಾರ ಸಂಘಗಳ ಹಿತದೃಷ್ಟಿಯಿಂದ ಬಡ್ಡಿ ಮನ್ನಾ ಮಾಡಿರುವುದಿಲ್ಲ.

ಮೂಲ್ಕಿ ಸೊಸೈಟಿಯಲ್ಲಿ ಚಿನ್ನಾಭರಣದ ಕಳುವು

561 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಸಂಘದಲ್ಲಿ ಅಡವಿಟ್ಟ ಚಿನ್ನಾಭರಣ ಎಷ್ಟು ಮೌಲ್ಯದ್ದು ಕಳುವಾಗಿದೆ?

ಆ) ಇನ್ಸೂರೆನ್ಸಿನಿಂದ ಎಷ್ಟು ಪರಿಹಾರ ಸಿಕ್ಕಿದೆ?

ಇ) ಈ ಸೊಸೈಟಿಯ ಆರ್ಥಿಕ ಕಷ್ಟದಿಂದಾಗಿ ಈಗ ನಡೆಸಲಿಕ್ಕಾಗದ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಸೊಸೈಟಿಯ ಪುನಃ ಯೋಗ್ಯ ರೀತಿಯಲ್ಲಿ ವ್ಯವಹಾರ ನಡೆಸಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ರೂ. 22,64,062-00

ಆ) ರೂ. 6,42,870-00